Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ


भाग–IX अनुभाग 1

PART IX SECTION 1

ಭಾಗ IX ವಿಭಾಗ 1

**प्राधिकार से प्रकाशित**

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1 | नई दिल्ली मंगलवार मार्च–13 1984 | रुधिरोद्गारि 1905 (शक) | खण्ड–1 |
| No. 1 | New Delhi Tuesday, March 13, 1984 | Rudhirodgari-1905 (Saka) | Vol. 1 |
| ಸಂಖ್ಯೆ ೧ | ನವದೆಹಲಿ ಮಂಗಳವಾರ, ಮಾರ್ಚ್ ೧೩, ೧೯೮೪ | ರುಧಿರೋದ್ಗಾರಿ-೧೯೦೫ (ಶಕ) | ಸಂಪುಟ ೧ |


## MINISTRY OF LAW, JUSTICE & COMPANY AFFAIRS

### (Legislative Department)

New Delhi, September 16, 1983/Rudhirodgari 1905 (Sakha)

The translations in Kannada of the foloowing namely—(1) The wakf Act, 1954, (2) The Railway property (unlawful possession) Act, 1966 (3) The Telegraph wires (unlawful possession) Act, 1950 (4) The Disputed Elections (Prime minister and speaker) Act, 1977 (5) The Dock workers (Regulation of employment) Act, 1943 are hereby published under the authority of the president and shall be deemed to be the authorised translations thereof in Kannada under clause (a) of Section 2 of the authorised Translations (central lwas) Act, 1973 (50 of 1973).

---

ಕೆಳಕಂಡ ಅಧಿನಿಯಮಗಳ ಎಂದರೆ,–(೧) ವಕ್ಫ್ ಅಧಿನಿಯಮ ೧೯೫೪ (೨) ರೈಲ್ವೆ ಸ್ವತ್ತಿನ (ಕಾನೂನು ವಿರುದ್ಧ ಸ್ವಾಧೀನ) ಅಧಿನಿಯಮ, ೧೯೬೬ (೩) ಟೆಲಿಗ್ರಾಫ್ ತಂತಿಗಳು (ಕಾನೂನು ವಿರುದ್ಧ ಸ್ವಾಧೀನ) ಅಧಿನಿಯಮ, ೧೯೫೦ (೪) ಪ್ರಧಾನ ಮಂತ್ರಿ ಮತ್ತು ಅಧ್ಯಕ್ಷರ) ವಿವಾದಿತ ಚುನಾವಣಾ ಅಧಿನಿಯಮ, ೧೯೭೭ (೫) ಹಡಗುಕಟ್ಟೆ ಕೆಲಸಗಾರರ (ನಿಯೋಜನಾ ವಿನಿಮಯಗಳು) ಅಧಿನಿಯಮ, ೧೯೪೮–ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ (ಕೇಂದ್ರ ಕಾನೂನುಗಳ) ಅಧಿನಿಯಮ, ೧೯೭೩ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದು.

# ಟೆಲಿಗ್ರಾಫ್ ತಂತಿ (ಅಕ್ರಮ ಸ್ವಾಧೀನ) ಅಧಿನಿಯಮ, 1950

(1950ರ ಅಧಿನಿಯಮ ಸಂಖ್ಯೆ 74)

[28ನೇ ಡಿಸೆಂಬರ್, 1950.]

ಟೆಲಿಗ್ರಾಫ್ ತಂತಿಗಳ ಸ್ವಾಧೀನತೆಯನ್ನು ವಿನಿಯಮನಗೊಳಿಸುವ ಮತ್ತು ಅದನ್ನು ಕಾನೂನು ವಿರುದ್ಧವಾಗಿ ಸ್ವಾಧೀನದಲ್ಲಿ ಇಟ್ಟುಕೊಂಡಿರುವ ಅಪರಾಧಕ್ಕೆ ದಂಡನೆ ವಿಧಿಸುವ ಬಗ್ಗೆ ಉಪಬಂಧಿಸುವ ಅಧಿನಿಯಮ.

ಸಂಸತ್ತು ಈ ಕೆಳಕಂಡಂತೆ ಅಧಿನಿಯಮಿಸುತ್ತದೆ:–

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಟೆಲಿಗ್ರಾಫ್ ತಂತಿ (ಅಕ್ರಮ ಸ್ವಾಧೀನ) ಅಧಿನಿಯಮ, 1950 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ಅನ್ವಯವಾಗತಕ್ಕದ್ದು.

(3) ಇದು ಯಾವುದೇ ರಾಜ್ಯದಲ್ಲಿ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಅಂಥ ರಾಜ್ಯಕ್ಕಾಗಿ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ರಾಜ್ಯಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ,

(ಎ) "ನಿಯಮಿಸಲಾದುದು" ಎಂದರೆ, ಈ ಅಧಿನಿಯವದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯವಿಸಲಾದುದು;

(ಬಿ) "ಟೆಲಿಗ್ರಾಫ್ ತಂತಿ" ಎಂದರೆ, ಮಿಲಿಮೀಟರ್‌ಗಳಲ್ಲಿರುವ ಡಯಾಮೀಟರ್‌ನ ಯಾವುದೇ ತಾಮ್ರದ ತಂತಿ, ಅದು

(i) 2.43 ಮಿ.ಮೀ. ಗಿಂಥ ಕಡಿಮೆಯಿಲ್ಲದೆ ಮತ್ತು 2.53 ಮಿ. ಮೀ. ಗಿಂಥ ಹೆಚ್ಚಿಲ್ಲದಂತೆ; ಅಥವಾ

(ii) 2.77 ಮಿ.ಮೀ. ಗಿಂಥ ಕಡಿಮೆಯಿಲ್ಲದೆ ಮತ್ತು 2.87 ಮಿ.ಮೀ. ಗಿಂಥ ಗಿಂಥ ಹೆಚ್ಚಿಲ್ಲದಂತೆ; ಅಥವಾ

(iii) 3.42 ಗಿಂತ ಹೆಚ್ಚಿಲ್ಲದಂತೆ; ಅಥವಾ ಕಡಿಮೆಯಿಲ್ಲದೆ ಮತ್ತು 3.52 ಗಿಂಥ ಹೆಚ್ಚಿಲ್ಲದಂತೆ; ಇರಬೇಕು.

**3. ಟೆಲಿಗ್ರಾಫ್ ತಂತಿಗಳ ಸ್ವಾಧೀನತೆಯನ್ನು ಘೋಷಿಸುವ ಕರ್ತವ್ಯ.–** ಟೆಲಿಗ್ರಾಫ್ ತಂತಿ ಸ್ವಾಧೀನದಲ್ಲಿ ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ಈ ಅಧಿನಿಯಮವು ಜಾರಿಗೆ ಬಂದ ಆರು ತಿಂಗಳುಗಳ ಒಳಗಾಗಿ, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಪ್ರಾಧಿಕಾರಕ್ಕೆ ತನ್ನ ಸ್ವಾಧೀನದಲ್ಲಿರುವ ಟೆಲಿಗ್ರಾಫ ತಂತಿಯ ಪ್ರಮಾಣವನ್ನು ತಿಳಿಸಿ ಲಿಖಿತದಲ್ಲಿ ಘೋಷಣೆ ಮಾಡತಕ್ಕದ್ದು.

**4. ಟೆಲಿಗ್ರಾಫ್ ತಂತಿಗಳ ಪರಿವರ್ತಿನೆ ಅಥವಾ ಮಾರಾಟಾದ ಕರ್ತವ್ಯ.–** ಹತ್ತು ಪೌಂಡುಗಳಗಿಂತ ಹೆಚ್ಚಿನ ಪ್ರಮಾಣದ  ಟೆಲಿಗ್ರಾಫ್ ತಂತಿಗಳನ್ನಿ ಸ್ವಾಧೀನದಲ್ಲಿಟ್ಟುಕೊಂಡಿರುವ ಪ್ರತಿಯೊಬ್ಬ ವ್ಯಕ್ತಿಯು, ಈ ಅಧಿನಿಯಮದ ಪ್ರಾರಂಭದಿಂದ ಒಂದು ವರ್ಷದೊಳಗೆ, ಹತ್ತು ಪೌಂಡುಗಳಿಗಿಂತ ಹೆಚ್ಚಿರುವ ಎಲ್ಲಾ ತಂತಿಯನ್ನು ಲೋಹದ ಗಟ್ಟಿಯನ್ನಾಗಿ  ಪರಿವರ್ತಿಸತಕ್ಕದ್ದು:

ಪರಂತು, ಟೆಲಿಗ್ರಾಫ್ ತಂತಿಯನ್ನು ಸ್ವಾಧೀನದಲ್ಲಿಟ್ಟುಕೊಂಡಿರುವಂಥ ಯಾರೇ ವ್ಯಕ್ತಿಯು, ಇಡಿಯಾಗಿ ಅಥವಾ ಭಾಗಶವಾಗಿ  ನಿಯಮಿಸದಂಥ ಬೆಲೆಗೆ ಮತ್ತು ಅಂತಹ ಪ್ರಾಧಿಕಾರಕ್ಕೆ ಮಾರಾಟ ಮಾಡುವುದಕ್ಕೆ ಮುಕ್ತನಾಗಿರತಕ್ಕದ್ದು.

**4ಎ.  ಟೆಲಿಗ್ರಾಫ್ ತಂತಿಗಳ ಮಾರಾಟಕ್ಕೆ ಅಥವಾ ಖರೀದಿಗೆ ನಿಷೇಧ.–** ಟೆಲಿಗ್ರಾಫ್ ತಂತಿಗಳ (ಕಾನೂನು ವಿರುದ ಸ್ವಾಧೀನ) ತಿದ್ದುಪಡಿ ಅಧಿನಿಯಮ, 1953 (1953ರ 53)ರ ಪ್ರಾರಂಭದ ನಂತರ ನಿಯಮಿಸಬಹುದಾದಂತಹ ಪ್ರಾಧಿಕಾರದ ಅನುಮತಿಯಿಂದ ಹೊರತು ಟೆಲಿಗ್ರಾಫ್ ತಂತಿಗಳ ಯಾವುದೇ ಪ್ರಮಾಣವನ್ನು ಯಾವನೇ ವ್ಯಕ್ತಿಯು ವರಾರಾಟ ಮಾಡತಕ್ಕದ್ದಲ್ಲ ಅಥವಾ ಖರೀದಿಸತಕ್ಕದ್ದಲ್ಲ.

**5. ಕಾನೂನುಬಾಹಿರ ಟೆಲಿಗ್ರಾಫ್ ತಂತಿಗಳ ಸ್ವಾಧೀನತೆಯನ್ನು ಹೊಂದಿರುವ ಬಗ್ಗೆ ದಂಡ.–** ಯಾವುದೇ ಪ್ರಮಾಣದ ಟೆಲಿಗ್ರಾಫ್ ತಂತಿಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವನೆಂದು ಕಂಡುಬಂದ ಅಥವಾ ರುಜುವಾತಾದ ಯಾರೇ ವ್ಯಕ್ತಿಯು, ಆ ಟೆಲಿಗ್ರಾಫ್ ತಂತಿಗಳನ್ನು ಕಾನೂನುಬದ್ಧವಾಗಿ ತನ್ನ ಸ್ವಾಧೀನಕ್ಕೆ ಬಂದಿವೆಯೆಂದು ಅವನು ರುಜುವಾತುಪಡಿಸಿದ ಹೊರತು,–

(ಎ) ಮೊದಲನೆಯ ಅಪರಾಧಕ್ಕಾಗಿ, ಐದು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ಅಂಥ ಕಾರಾವಾಸದ ಅವಧಿಯು ನ್ಯಾಯಾಲಯದ ತೀರ್ಪಿನಲ್ಲಿ ದಾಖಲಿಸಬೇಕಾದ ವಿಶೇಷ ಮತ್ತು

ಸಾಕಷ್ಟು ಕಾರಣಗಳು ಇಲ್ಲದಿದ್ದಲ್ಲಿ, ಒಂದು ವರ್ಷಕ್ಕಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ಅಂಥ ಜುಲ್ಮಾನೆಯು ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರತಕ್ಕದ್ದಲ್ಲ;

(ಬಿ) ಎರಡನೆಯ ಅಥವಾ ತರುವಾಯದ ಅಪರಾಧಕ್ಕಾಗಿ, ಐದು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ಮತ್ತು ತೀರ್ಪಿನಲ್ಲಿ ದಾಖಲಿಸಬೇಕಾದ ವಿಶೇಷವಾದ ಮತ್ತು ಸಾಕಷ್ಟು ಕಾರಣಗಳು ಇಲ್ಲದಿರುವಲ್ಲಿ, ಅಂಥ ಕಾರಾವಾಸದ ಅವಧಿಯು ಎರಡು ವರ್ಷಗಳಿಗಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ಅಂಥ ಜುಲ್ಮಾನೆಯು ಎರಡು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರತಕ್ಕದ್ದಲ್ಲ:

ಪರಂತು, ಒಬ್ಬ ವ್ಯಕ್ತಿಯು ಯಾವುದೇ ಪ್ರಮಾಣದ ಟೆಲಿಗ್ರಾಫ್ ತಂತಿಗಳಿಗೆ ಸಂಬಂಧಿಸಿದ 3ನೇ ಪ್ರಕರಣದ ಮೇರೆಗೆ ಘೋಷಣೆಯನ್ನು ಮಾಡಿರುವಲ್ಲಿ, ಹಾಗೆ ಘೋಷಿಸಿದ ಪ್ರಮಾಣಕ್ಕೆ ಸಂಬಂಧಿಸಿ, ಅದು ತನ್ನ ಸ್ವಾಧೀನಕ್ಕೆ ಕಾನೂನುಬದ್ಧವಾಗಿ ಬಂದಿತೆಂದು ರುಜುವಾತುಪಡಿಸುವ ಹೊಣೆಯು ಅಂಥ ವ್ಯಕ್ತಿಯ ಮೇಲೆ ಇರತಕ್ಕದ್ದಲ್ಲ.

**6. 3ನೇ ಪ್ರಕರಣ ಅಥವಾ 4ನೇ ಪ್ರಕರಣದ ಉಪಬಂಧಗಳ ಉಲ್ಲಂಘನೆಗಾಗಿ ದಂಡ.–** 3ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದ ಘೋಷಣೆಯನ್ನು ಮಾಡಲು ತಪ್ಪುವ ಅಥವಾ 4ನೇ ಅಥವಾ 4ಎ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಆರು ತಿಂಗಳುಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ, ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**6ಎ. ಶೋಧನೆಯ ಮತ್ತು ಅಭಿಗ್ರಹಣದ ಅಧಿಕಾರಗಳು.–** (1) ಸಬ್–ಇನ್‌ಸ್ಪೆಕ್ಟರನಿಗಿಂತ ಕಡಿಮೆ ದರ್ಜೆಯವನಲ್ಲದ ಪೊಲೀಸ್ ಅಧಿಕಾರಿಯ,–

(i) ಯಾವುದೇ ಟೆಲಿಗ್ರಾಫ್ ತಂತಿಯನ್ನು;

(ii) ಅಂಥ ಟೆಲಿಗ್ರಾಫ್ ತಂತಿಯನ್ನು ಸಾಗಿಸಲು ಬಳಸಿದ ಯಾವುದೇ ವಾಹನವನ್ನು ಅಥವಾ ಪ್ರಾಣಿಯನ್ನು,

– ಅಂಥ ಟೆಲಿಗ್ರಾಫ್ ತಂತಿಗೆ ಸಂಬಂಧಿಸಿ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಲಾಗಿದೆಯೆಂದು ಅಥವಾ ಉಲ್ಲಂಘಿಸಲಾಗುತ್ತಿದೆಯೆಂದು ಅಥವಾ ಉಲ್ಲಂಘಿಸಲಾಗುವುದೆಂದು ಸಕಾರಣ ಸಂದೇಹವಿದ್ದರೆ,

– ಅಭಿಗ್ರಹಿಸಬಹುದು." ಅಥವಾ ಯಾವುದೇ ಸ್ಥಳವನ್ನು ಶೋಧಿಸಬಹುದು ಮತ್ತು ಮೇಲ್ಕಂಡದನ್ನು ಅಭಿಗ್ರಹಿಸಬಹುದು.

(2) ಶೋಧನೆಗಳಿಗೆ ಮತ್ತು ಅಭಿಗ್ರಹಣಗಳಿಗೆ ಸಂಬಂಧಿಸಿದ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು, ಈ ಪ್ರಕರಣದ ಮೇರೆಗೆ ಮಾಡಲಾದ ಶೋಧನೆಗಳಿಗೆ ಮತ್ತು ಅಭಿಗ್ರಹಣಗಳಿಗೆ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಅನ್ವಯವಾಗತಕ್ಕದ್ದು.

**6ಬಿ. ಟೆಲಿಗ್ರಾಫ್ ತಂತಿಗಳು, ವಾಹನಗಳು ಇತ್ಯಾದಿಗಳನ್ನು ಅಧಿಹರಣ ಮಾಡುವುದು.–** ಈ ಅಧಿನಿಯಮದ ಯಾವುದೇ ಉಪಬಂಧಗಳ ಉಲ್ಲಂಘನೆಗಾಗಿ ಯಾರೇ ವ್ಯಕ್ತಿಯು ಅಪರಾಧಿಯೆಂದು ನಿರ್ಣಿತನಾಗಿರುವಲ್ಲಿ ಯಾವ ಟೆಲಿಗ್ರಾಫ್ ತಂತಿಗಳಿಗೆ ಸಂಬಂಧಿಸಿ ಉಲ್ಲಂಘನೆ ಮಾಡಲಾಗಿದೆಯೋ ಆ ಟೆಲಿಗ್ರಾಫ್ ತಂತಿಗಳು ಮತ್ತು ಅಂಥ ಟೆಲಿಗ್ರಾಫ್ ತಂತಿಗಳನ್ನು ಸಾಗಿಸಲು ಬಳಸಿದ ವಾಹನವು ಅಥವಾ ಪ್ರಾಣಿಯು ಅದನ್ನು ಒಡೆಯನಾದ ತನಗೆ, ಅವನ ಏಜೆಂಟನು ಯಾರಾದರೂ ಇದ್ದರೆ ಅವನಿಗೆ ಮತ್ತು ಆ ವಾಹನವನ್ನು ಅಥವಾ ಪ್ರಾಣಿಯನ್ನು ನೋಡಿಕೊಳ್ಳುವ ವ್ಯಕ್ತಿಗೆ ಗೊತ್ತಿಲ್ಲದಂತೆ ಅಥವಾ ಅವನ ಪರೋಕ್ಷ ಸಮ್ಮತಿಯಿಲ್ಲದ ಹಾಗೆ ಬಳಸಲಾಗಿದೆಯೆಂದು ಮತ್ತು ಅವರಲ್ಲಿ ಪ್ರತಿಯೊಬ್ಬನೂ ಅಂಥ ಬಳಕೆಯ ವಿರುದ್ಧ ಎಲ್ಲ ಯುಕ್ತ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡಿದ್ದನೆಂಬುದಾಗಿ ಆ ವಾಹನದ ಅಥವಾ ಪ್ರಾಣಿಯ ಒಡೆಯನು ರುಜುವಾತು ಪಡಿಸಿದ ಹೊರತು, ನ್ಯಾಯಾಲಯದ ಅಧಿಹರಣಕ್ಕೆ ಗುರಿಯಾಗತಕ್ಕದ್ದು:

ಪರಂತು, ಸರಕುಗಳನ್ನು ಅಥವಾ ಪ್ರಯಾಣಿಕರನ್ನು ಬಾಡಿಗೆಗಾಗಿ ಸಾಗಿಸುವ ಸಲುವಾಗಿ ಅಂಥ ಯಾವುದೇ ವಾಹನವನ್ನು ಅಥವಾ ಪ್ರಾಣಿಯನ್ನು ಬಳಸಲಾಗುತ್ತಿರುವಲ್ಲಿ, ಆ ವಾಹನವನ್ನು ಅಥವಾ ಪ್ರಾಣಿಯನ್ನು ಅಧಿಹರಣಮಾಡಿಕೊಳ್ಳುವುದರ ಬದಲಾಗಿ ಅದರ ಅಭಿಗ್ರಹಣದ ದಿನದಂದು ಅದಕ್ಕಿದ್ದ ಮಾರುಕಟ್ಟೆ ಬೆಲೆಯನ್ನು ಅಥವಾ ಯಾವ ಟೆಲಿಗ್ರಾಫ್ ತಂತಿಗಳ ಸಂಬಂಧದಲ್ಲಿ ಉಲ್ಲಂಘನೆಯನ್ನು ಮಾಡಲಾಯಿತೋ ಆ ಟೆಲಿಗ್ರಾಫ್ ತಂತಿಗಳ ಬೆಲೆಯನ್ನು, ಇವೆರಡರಲ್ಲಿ ಯಾವುದು ಕಡಿಮೆಯೋ ಅದನ್ನು ಮೀರದಷ್ಟು ಜುಲ್ಮಾನೆಯನ್ನು ಸಂದಾಯ ಮಾಡುವ ಅವಕಾಶವನ್ನು ಆ ವಾಹನದ ಅಥವಾ ಪ್ರಾಣಿಯ ಒಡೆಯನಿಗೆ ಕೊಡತಕ್ಕದ್ದು:

ಮತ್ತೂ ಪರಂತು, ಹಾಗೆ ಅಭಿಗ್ರಹಣ ಮಾಡಲಾದ ಮತ್ತು ಅಧಿಹರಣ ಮಾಡಲಾದ ಯಾವುದೇ ಟೆಲಿಗ್ರಾಫ್ ತಂತಿಗಳನ್ನು ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಕ್ಕೆ ನ್ಯಾಯಾಲಯವು ಕೊಡತಕ್ಕದ್ದು.

**7. ಅಪರಾಧಗಳ ಸಂಜ್ಞಾನ.–** (1) ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರನಾಗಿರುವ ವ್ಯಕ್ತಿಯು ಮಾಡಿದ ಅಪರಾಧವನ್ನುಂಟು ಮಾಡುವ ಸಂಗತಿಗಳನ್ನೊಳಗೊಂಡ ಲಿಖಿತ ವರದಿಯ ಮೇಲೆ ಹೊರತು, ಯಾವ ನ್ಯಾಯಾಲಯವೂ ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನಿಗಿಂತ ಅಥವಾ ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟನಿಗಿಂತ ಕಡಿಮೆ ದರ್ಜೆಯ ಯಾವ ನ್ಯಾಯಾಲಯವೂ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ.

**8. ನಿಯಮಗಳ ರಚನಾಧಿಕಾರ.–** (1) ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು ಎಂದರೆ:–

(ಎ) 3ನೇ ಪ್ರಕರಣದ ಮೇರೆಗಿನ ಘೋಷಣೆಯನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಪ್ರಾಧಿಕಾರಿಗಳಿಗೆ ಸಲ್ಲಿಸಬಹುದು;

(ಬಿ) 4ನೇ ಪ್ರಕರಣದ ಮೇರೆಗೆ ಟೆಲಿಗ್ರಾಫ್ ತಂತಿಗಳನ್ನು ಯಾವ ಪ್ರಾಧಿಕಾರಿಗಳಿಗೆ, ಮತ್ತು ಯಾವ ಬೆಲೆಗಳಿಗೆ ಮಾರಬಹುದು.

(3) ಈ ಪ್ರಕರಣದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು

ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇರಿಸತಕ್ಕದ್ದು, ಮತ್ತು ಮೇಲೆ ಹೇಳಲಾದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ತದನಂತರ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಡು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗದಂತೆ ಇರತಕ್ಕದ್ದು.